ಓ.ಎಸ್‌ಃ151/20
ಪಿ.ಡಬ್ಲ್ಯೂ: 2

<u>ದಿನಾಂಕಃ **09-10-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಯ ಪರವಾಗಿ ಶ್ರೀ.ಜಿ.ಎಸ್.ಪಿ. ವಕೀಲರಿಂದಃ</u>**

ಧರ್ಮಬಾಯಿ ನ್ಯಾಯಾಲಯಕ್ಕೆ ಇಂದು ಬಂದಿರುತ್ತಾಳೆ. ಧರ್ಮಬಾಯಿ ಹಾಗೂ ಚಂದ್ರಕಾಂತ ನನ್ನ ಸಂಬಂಧಿಕರು. ಚಂದ್ರಕಾಂತ ನನ್ನ ಸೋದರಮಾವನ ಮಗ ಇರುತ್ತಾನೆ. ಧರ್ಮಬಾಯಿ ಹಾಗೂ ಚಂದ್ರಕಾಂತ ನನ್ನ ಸಂಬಂಧಿಕರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು, ಧರ್ಮಬಾಯಿ, ಚಂದ್ರಕಾಂತ ಒಂದೇ ಸಮಾಜಕ್ಕೆ ಸೇರಿದವರು ಎಂದರೆ ಸರಿ. ನಾನು ಕ್ಷತ್ರೀಯ ಸಮಾಜದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಸಮಾಜದ ಯಾವುದೇ ಪ್ರಕರಣ ಇದ್ದಲ್ಲಿ ನಾನು ನ್ಯಾಯಾಲಯಕ್ಕೆ ಹೋಗುತ್ತೇನೆ ಎಂದರೆ ಸರಿ. ನನಗೆ ಈ ದಾವಾದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಧರ್ಮಬಾಯಿ ತಂದೆ ಹೆಸರು ಮಲ್ಲಯ್ಯ ಇರುತ್ತದೆ. ಮಲ್ಲಯ್ಯನಿಗೆ ಇಬ್ಬರ ಹೆಂಡತಿಯರು ಇರುತ್ತಾರೆ, ಅವರ ಹೆಸರು ಪಾರ್ವತಿ ಮತ್ತು ಶಾಂತಾಬಾಯಿ ಇರುತ್ತದೆ. ಶಾಂತಬಾಯಿ ಮಲ್ಲಯ್ಯನ ಹೆಂಡತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆತನ 2 ನೇ ಹೆಂಡತಿ ಸಾವಿತ್ರಿಬಾಯಿ ಇರುತ್ತಾಳೆ ಎಂದರೆ ಸರಿ.

ಮೊದಲನೇ ಹೆಂಡತಿಗೆ 8 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಈ ದಾವಾದಲ್ಲಿ 8 ಜನ ಮಕ್ಕಳನ್ನು ಸೇರಿಸಿರುವುದಿಲ್ಲ. ಮಲ್ಲಯ್ಯನಿಗೆ ದಾವಾ ಆಸ್ತಿ ಮಾತ್ರ ಇರುತ್ತದೆ ಎಂದರೆ ಸರಿ. ಮಲ್ಲಯ್ಯನ ಹೆಸರಿಗೆ ಎರಡು ಮನೆಗಳು ಇರುತ್ತವೆ. ಈ ದಾವಾದಲ್ಲಿ ಕೇವಲ ಒಂದೇ ಮನೆ ಸೇರಿಸಿರುತ್ತಾರೆ ಎಂದರೆ ಸಾಕ್ಷಿಯು ಮಲ್ಲಯ್ಯನ ಹೆಸರಿಗೆ ಎರಡು ಮನೆಗಳು ಇರುತ್ತವೆ ಎಂದು ನುಡಿದಿರುತ್ತಾರೆ. ಧರ್ಮಬಾಯಿ ಮತ್ತೊಂದು ಮನೆಯನ್ನು ಈ ದಾವಾದಲ್ಲಿ ಸೇರಿಸಿರುವುದಿಲ್ಲ ಆದ್ದರಿಂದ ಈ ದಾವಾ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ನೋಡಿರವುದಿಲ್ಲ. ದಾವಾ ಆಸ್ತಿ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ದಾವಾ ಆಸ್ತಿ ವಿಭೂತಿಹಳ್ಳಿ ಹತ್ತಿರ ಇರುತ್ತದೆ ಅದರ ಸರ್ವೆನಂಬರ ಹಾಗೂ ವಿಸ್ತರಣೆ ನನಗೆ ಗೊತ್ತಿರುವುದಿಲ್ಲ.

ಧರ್ಮಬಾಯಿ ಮದುವೆ ವೇಳೆಯಲ್ಲಿ ನಾನು ಚಿಕ್ಕವನು ಇದ್ದೆ, ನಾನು ಮದುವೆ ನೋಡಿರುವುದಿಲ್ಲ. ಧರ್ಮಬಾಯಿ ಮದುವೆ ಅವರ ತಂದೆ ಮಲ್ಲಯ್ಯ ಜೀವಂತ ಕಾಲದಲ್ಲಿ ಆಗಿರುತ್ತದೆ ಎಂದರೆ ಸರಿ. ಮದುವೆ ವೇಳೆಯಲ್ಲಿ ಧರ್ಮಬಾಯಿಗೆ ಬಂಗಾರ ಹಾಗೂ ಬೆಲೆ ಬಾಳುವ ವಸ್ತುಗಳನ್ನು ನೀಡಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಯಂಕೋಬಾ ಇತನಿಗೆ ವಾದಿಯ ತಾಯಿ ಬಂಗಾರ ನೀಡಿದ್ದನ್ನು ನಾನು ನೋಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ

ಮಾಹಿತಿ ಇರುವುದಿಲ್ಲ, ಧರ್ಮಬಾಯಿ ಮಾತು ಕೇಳಿ ಸುಳುಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಧರ್ಮಬಾಯಿ ಹಾಗೂ ಆಕೆಯ ಸಹೋದರಿಯರು ಮುಂಚೆ ಬೇರೆಯಾಗಿ ಅವರ ಅವರ ಪಾಲಿನಲ್ಲಿ ಬಂದಂತಹ ಜಮೀನಿನ ಸ್ವಾದಿನದಲ್ಲಿ ಇರುತ್ತಾರೆ ಎಂದರೆ ಸರಿ. ಧರ್ಮಬಾಯಿ ಹಾಗೂ ಚಂದ್ರಕಾಂತ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಧರ್ಮಬಾಯಿ ಮಗಳನ್ನು ಪ್ರತಿವಾದಿ ನಂ.1 ರವರು ವಿವಾಹ ಆಗಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆ : ಇಲ್ಲ.**

**( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆಎಂಎಫ್‌ಸಿ ನ್ಯಾಯಾಧೀಶರು
ಶಹಾಪೂರ.**